

ಚುನಾವಣೆಯನ್ನು ಬಹಿರಂಗಪಡಿಸದಿದ್ದರೆ ಅದು ಆತ್ಮವಂಚನೆಯಾಗುತ್ತದೆ, ಇದನ್ನು ಪತ್ರಿಕಾಗೋಷ್ಠಿ ನಡೆಸಿ ಬಹಿರಂಗಪಡಿಸುವುದೇ ಸರಿ' ಎಂದೂ ಚಿಂತಿಸಿದ. ತಿಪ್ಪಣ್ಣನನ್ನೂ ಪತ್ರಿಕಾಗೋಷ್ಠಿಗೆ ಕರೆಯುವುದೆಂದು ನಿರ್ಧರಿಸಿದ. ಜ್ವರದಿಂದ ಬೆವರಿದ ಮೈಯನ್ನು ಒರೆಸಿಕೊಳ್ಳುತ್ತ ಅವನ ಮನೆಯತ್ತ ನಡೆದ.

ಗುರ್ಲಿಂಗನ ಆದರ್ಶವನ್ನೂ, ಎಂತವರನ್ನೂ ಎದುರು ಹಾಕಿಕೊಳ್ಳುವ ಧೈರ್ಯವನ್ನು ಹೊಗಳಿದ ತಿಪ್ಪಣ್ಣ ಮಾರನೇ ದಿನ ತಾನೇ ಪತ್ರಿಕಾಗೋಷ್ಠಿಯ ವ್ಯವಸ್ಥೆ ಮಾಡುವುದಾಗಿ ತಿಳಿಸಿದ. ಗುರ್ಲಿಂಗ ಹೊರಟುಹೋದ ತಕ್ಷಣವೇ ಒಂದೊಂದೇ ಪತ್ರಿಕೆಯವರಿಗೆ ಮೊಬೈಲಿನಲ್ಲಿ ಕರೆ ಮಾಡಿ ಬೆಳಿಗ್ಗೆ ಗುರ್ಲಿಂಗನ ಪತ್ರಿಕಾಗೋಷ್ಠಿ